ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ತಾವು ಲಕ್ಕವಳ್ಳಿಗೆ ನಿರ್ಧರಿಸಿರುವ ಪ್ರಕಾರ ತುಂಗಾ ಪ್ರಾಜೆಕ್ಟಿಗೂ ಅದೇರೀತಿ ಮಾಡಿದ್ದರೆ ಅನುಕೂಲವಾಗುತ್ತಿರಲಿಲ್ಲವೇ? ಮತ್ತು ಈ ತುಂಗಾ ಪ್ರಾಜೆಕ್ಟಿನ ಸಮೀಪದಲ್ಲೇ 2-3 ಫರ್ಲಾಂಗುಗಳಲ್ಲಿ ಈ ಕಲ್ಲುಗಳಿರುತ್ತವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಅದಕ್ಕೆ ಉತ್ತರವನ್ನು ಆಗಲೇ ತಿಳಿಸಿದ್ದಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಆಯಾಯ ಸ್ಥಳಸನ್ನಿವೇಶಗಳ ಮೇಲೆ ಹೋಗುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಾಗೆ ಆ ಸನ್ನಿವೇಶಗಳೆಲ್ಲಾ ಅನುಕೂಲವಾಗಿದ್ದಾಗ ಏಕೆ ಮಾಡದಾರದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇರೆ ತೊಂದರೆಗಳಿರಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅಂಥಾ ತೊಂದರೆಗಳ್ಯಾವುವು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Quotations ಗಳನ್ನು ಕರೆದು ಮಾಡಿದ್ದೆವು. ಅವುಗಳ ಪೈಕಿ ಯಾವುದು ತೀರಾ ಕಮ್ಮಿಯದಾಗಿತ್ತೋ ಅದನ್ನು ನಾವು ಅಂಗೀಕರಿಸಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಾಗೆ ಟೆಂಡರುಗಳನ್ನು ಕರೆದು ಮಾಡದೆ ಬೇರೆ ರೀತಿ ಮಾಡಿರುವ ಕಡೆ ಈಗ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಚಾರವನ್ನು ಬೇಕಾದರೆ ಪುನರ್ಪರಿಶೀಲನೆ ಮಾಡಲಾಗುತ್ತೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಾಗೆ ಬಂದ quotations ಗಳಲ್ಲಿ ತೀರಾ ಕಡಿಮೆಯದನ್ನು ಸಹ ಅಂಗೀಕಾರ ಮಾಡಿರುವುದಿಲ್ಲವೆಂಬ ಅಂಶವನ್ನೂ ಸಹ ಪುನಃ ಪರಿಶೀಲಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಲಿ; ಎಲ್ಲವನ್ನೂ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಎಷ್ಟೆಷ್ಟು ದೂರದಿಂದ ಈ ಎರಡು ಪ್ರಾಜೆಕ್ಟುಗಳಿಗೂ ಬೇಕಾದ ಕಲ್ಲುಗಳು ದೊರೆಯುತ್ತಿವೆಯೆಂದು ಕೇಳಿರತಕ್ಕ ಪ್ರಶ್ನೆಗೆ, ಲಕ್ಕವಳ್ಳಿಗೆ ಮಾತ್ರ ಇಷ್ಟಿಷ್ಟು ದೂರವೆಂದು ತಿಳಿಸಿ, ಈ ತುಂಗಾಕ್ಕೆ ಏಕೆ ಅರೀತಿ ತಿಳಿಸಿಲ್ಲ? ಏಕೆ ಲೀಡ್ ಧಾರ್ಜನ್ನು ನಿರ್ಧರಿಸಲಿಲ್ಲಾ?

ಅಧ್ಯಕ್ಷರು.—ಆ ಪ್ರಶ್ನೆಗೆ ಉತ್ತರವನ್ನು ಪ್ರಶ್ನೋತ್ತರಗಳ IIIನೆಯ ಭಾಗದಲ್ಲಿ (ಬಿ) ಉತ್ತರದಲ್ಲಿ ತಿಳಿಸಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ ಕಲ್ಲುಗಳನ್ನು ಸಾಗಿಸಬೇಕಾದರೆ ಒಂದು ಲೀಡ್ ನಿರ್ಧಾರಮಾಡದೆ ಇದನ್ನು ಪಿ. ಡಬ್ಲು. ಡಿ.ನವರು ಎಷ್ಟೆಷ್ಟು ಮೈಲಿಯಿಂದ ಬರುತ್ತೆಂಬುದನ್ನು ತಿಳಿಯದಿದ್ದರೆ ರೂಲ್ಸು ಪ್ರಕಾರ ಇದನ್ನು ನಿಗದಿ ಮಾಡಲು ಹೇಗೆ ಸಾಧ್ಯ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ತಿಳಿಸಲಾಗಿದೆ. $1\frac{1}{2}$ ಮೈಲಿಯಿಂದ ಕೆಲವುಕಡೆ 5 ಮೈಲಿಗಳಾಗುತ್ತೆ, ಕೆಲವುಕಡೆ 6 ಮೈಲಿಗಳಾಗುತ್ತೆಂದು ಉತ್ತರದಲ್ಲೇ ತಿಳಿಸಲಾಗಿದೆ. ಪ್ರಶ್ನೆಗೆ ಒದಗಿಸಿರತಕ್ಕ (ಸಿ) ಭಾಗದ ಉತ್ತರದಲ್ಲಿ ನೋಡಿ $1\frac{1}{2}$ ಯಿಂದ 6 ಮೈಲಿಗಳತನಕ ಇರುತ್ತೆಂದು ನಿರ್ಧರವಾಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಅಂದಮೇಲೆ ಈ ಲೀಡ್ ಧಾರ್ಜನ್ನು ಎರಡು ಪ್ರಾಜೆಕ್ಟುಗಳಿಗೂ ಒಂದೇ ದರದಲ್ಲಿ ಕೊಡಲಾಗುತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎರಡಕ್ಕೂ ವ್ಯತ್ಯಾಸವಿದೆಯೆಂದು ತಿಳಿಸಿದ್ದೇನೆ. ಅಲ್ಲಿರತಕ್ಕ ಮತ್ತು ಇಲ್ಲಿರತಕ್ಕ ಎರಡು ಸನ್ನಿವೇಶಗಳನ್ನೂ ನೋಡಿಕೊಂಡು ಕೆಲಸ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಕ್ವಾರೀಗಳು ಎಲ್ಲೆಲ್ಲಿರುತ್ತವೆಂಬುದು ಸರ್ಕಾರಕ್ಕೆ ಗೊತ್ತಿಲ್ಲದೇಇರುವ ಕಾರಣ ಅವರು ಇಂಥಾ ಕೆಲಸಗಳಿಗೆಲ್ಲಾ ಟೆಂಡರುಗಳನ್ನು ಕರೆಯುವುದು ಉತ್ತಮವಾಗಿದ್ದರೂ ಹಾಗೇಕೆ ಮಾಡಲಿಲ್ಲ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು quotations ಕರೆದು ಮಾಡಿದ್ದೆವು. ಅದರಂತೆ ಅದನ್ನು ಈಗ ಮಾಡಲಾಗಿದೆ ಮತ್ತು ಕ್ವಾರೀಗಳು ಎಲ್ಲೆಲ್ಲಿರುತ್ತವೆಂಬ ಅಂಶ ಸರ್ಕಾರದವರಿಗೆ ಗೊತ್ತಿದೆ. ಅಷ್ಟೇ ಅಲ್ಲದೆ ನುರ್ಕಿ ಮಾರ್ಟರಿಗಿಂತ lime and stone ಮಾರ್ಟರೇ ಉತ್ತಮವಾದುದಾದ್ದರಿಂದ, ಅದಕ್ಕೆ ಹಾಕತಕ್ಕ ಸುಣ್ಣದಕಲ್ಲನ್ನು ಸಹ ಪರೀಕ್ಷೆಮಾಡಿ ಅದನ್ನು ಉಪಯೋಗಿಸುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಟೆಂಡರುಗಳನ್ನು ಕರೆಯುವುದರಲ್ಲಿ ತಮಗೇನು ತೊಂದರೆ ಇದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Quotations ಕರೆದು ಮಾಡಿದ್ದೇವೆಂದು ಆಗಲೇ ತಿಳಿಸಿದ್ದೇನೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ಟೆಂಡರನ್ನು ಕರೆದು ಕೆಲಸಮಾಡಿದ್ದರೆ, ದೇಶದ ನಾನಾ ಭಾಗದಲ್ಲಿ ಇದು ಪ್ರಚಾರಕ್ಕೆ ಬಂದು ಜನರು ತಾನು ಮುಂದು, ನಾನು ಮುಂದು ಎಂದು ಮುಂದೆ ಬಂದಾಗ ಒಂದು ಪೈಪೋಟಿ ಹುಟ್ಟಿ ಅದರಿಂದ ಸರ್ಕಾರಕ್ಕೆ ಹೆಚ್ಚಿನಲಾಭ ಉಂಟಾಗುವುದಿಲ್ಲವೇ?

The Hon'ble Sri T. MARIAPPA—It is purely a matter of opinion.

Sri B. S. Narasinga Rao, Adviser for Public Works Department.

*Q.—218. Sri L. H. THIMMA BOI (Chikmagalur District—Depressed Class).—

Will the Government be pleased to state :—

(*a*) whether Sri B. S. Narasinga Rao, Adviser for Public Works Department, is regarded as in service ;

(*b*) if so, whether it should be regarded that he is in his extension ;

(*c*) if not regarded that he is in his extension, whether he is entertained to give only advice to the department ;

(*d*) whether he is permitted to be in direct charge of Tunga, Lakkavalli and Nugu Projects ;

(*e*) if so, under what rules of the Service Regulations ;

---

* Copy placed in the Assembly Library.

(SRI L. H. THIMMA BOI.)

(*f*) whether he is not a retired officer taken to service;

(*g*) under what rules of the Mysore Service Regulations, he is restored to service;

(*h*) whether there is any precedent?

A.—**The Hon'ble Sri T. MARIAPPA** (Home Minister).—

(*a*) Yes.

(*b*) He was retired and re-employed.

(*c*) He is re-employed. He not only gives advice but he is in charge of major irrigation works (*vide* Government Order placed on the table).*

(*d*) Yes.

(*e*) No reply is called for.

(*f*) Yes.

(*g*) He is re-employed after retirement.

(*h*) There are a number of precedents.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಿಂದೆ ಈ ಪಿ. ಡಬ್ಲ್ಯೂ. ಡಿ. ಗೆ ಒಬ್ಬ ಆಡ್ವೈಜರು ಇರುತ್ತಿದ್ದರೇ ಅಥವಾ ಹಾಗೊಂದು ಹುದ್ದೆ ಏನಾದರೂ ಇತ್ತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇವರು ಒಬ್ಬ ನಿವೃತ್ತ ಅಧಿಕಾರಿಗಳಾಗಿದ್ದರೂ ಮತ್ತೇಕೆ ಇವರನ್ನೇ ಈ ಹುದ್ದೆಗೆ ತೆಗೆದುಕೊಳ್ಳಲಾಯಿತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇವರಿಗಿದ್ದ ಅನುಭವ ಮತ್ತು ಸಾಮರ್ಥ್ಯಗಾಗಿ ಇವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲಾಯಿತು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇವರು 1945ನೆಯ ಇಸವಿಯಲ್ಲಿ ಜೋಗಿನ ಘಾಟ್ ನಕ್ಷತ್ರಿನಲ್ಲಿ ಎಗ್ಜಿಕ್ಯುಟೀವ್ ಇಂಜಿನಿಯರಾಗಿದ್ದ ಅಂಶ ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಿದ್ದರೂ ಆಗಿರಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇವರು ಜೋಗ್ ಘಾಟ್ ನಕ್ಷತ್ರಿನಲ್ಲಿದ್ದಾಗ 2 ಲಕ್ಷ ರೂಪಾಯಿಗಳನ್ನು ಹೇಗೆ ಖರ್ಚು ಮಾಡಿದರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಆಗ ಇವರಿಂದ ಸರ್ಕಾರಕ್ಕೆ 2 ಲಕ್ಷ ರೂಪಾಯಿಗಳು ನಷ್ಟವಾಗಿರುವುದು ತಮಗೆ ಗೊತ್ತಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹೋಗಲಿ; ಇವರು ತಿಪ್ಪಗೊಂಡನಹಳ್ಳಿ ಪ್ರಾಜೆಕ್ಟಿನಲ್ಲಿ ಅಸಿಸ್ಟೆಂಟ್ ಇಂಜಿನಿಯರಾಗಿದ್ದ ವಿಚಾರ ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಎಷ್ಟೋ ಕಡೆ ಹಾಗೆ ಕೆಲಸ ಮಾಡಿರಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಆಗ ಅವರು ಅಲ್ಲಿ ಕಟ್ಟಿಸಿದ ವೇಸ್ಟ್‌ವೀಯರ್ ಒಡೆದು ಹೋದದ್ದು ತಮ್ಮ ಗಮನದಲ್ಲಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

The Hon'ble Sri T. MARIAPPA.—He presumes and puts questions. They are not facts.

Sri L. H. THIMMA BOI.—I am stating the very facts.

ಇವರು ಮಾಡಿರತಕ್ಕ ಕೆಲಸಗಳ ಬಗ್ಗೆ ಮತ್ತು ಇವರ ಬೇರೆ ವಿಚಾರಗಳನ್ನೆಲ್ಲಾ ಇವರ ಸರ್ವೀಸ್ ರಿಜಿಸ್ಟರಿನಲ್ಲಿ ನಮೂದು ಮಾಡುತ್ತಿದ್ದಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡೇ ಮಾಡುತ್ತಾರೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹೀಗೆ ಇವರನ್ನು ಇಂಥಾ ಜವಾಬ್ದಾರಿಯುತವಾದ ಕೆಲಸಕ್ಕೆ ನೇಮಕಮಾಡಿಕೊಳ್ಳುವಾಗ ಇವರ ಸರ್ವೀಸ್ ರಿಜಿಸ್ಟರಿನಲ್ಲಿ ಏನೇನು ಬರೆದಿರುತ್ತದೆ ಎಂಬುದನ್ನು ನೋಡಿ ಮಾಡುವುದಿಲ್ಲವೇ?

ಅಧ್ಯಕ್ಷರು.—ಅದೆಲ್ಲವನ್ನೂ ಮೊದಲೇ ಅವರು ಚೀಫ್ ಇಂಜಿನಿಯರ್ ಆಗಿದ್ದ ಕಾಲದಲ್ಲೇ ನೋಡಿ ಮಾಡಿದ್ದಾರೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಾಗಾದರೆ ಇವರನ್ನು ಇನ್ನೂ ಎಷ್ಟು ದಿವಸಗಳತನಕ ಇಟ್ಟುಕೊಳ್ಳಬೇಕೆಂದು ಆರೋಚಿಸಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ವರ್ಷ ಕಾಲ ಮಾತ್ರ ಇರಬೇಕೆಂದಿದೆ. ಆದರ ಹೈಕಿ ಇನ್ನಿರ ತಕ್ಕದ್ದು ಕೇವಲ 9 ತಿಂಗಳೆಂದು ಕಾಣುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹೀಗೆ ಇವರನ್ನು ನೇಮಕಮಾಡಿಕೊಂಡಿದ್ದರಿಂದ ಅನುಕೂಲವಾಗುತ್ತದೆಂದು ತಾವು ಭಾವಿಸಿದ್ದೀರಾ? ಅಥವಾ ಈನುಗು, ತುಂಗಾ ಮತ್ತು ಲಕ್ಕವಳ್ಳಿ ಪ್ರಾಜೆಕ್ಟುಗಳಿಗೆ ಇವರಿಂದಾಗಿರತಕ್ಕ ಅನುಕೂಲವಾದರೂ ಏನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅನುಕೂಲವಾಗುತ್ತದೆಂದೇ ಹೀಗೆ ನೇಮಕಮಾಡಿಕೊಂಡಿದ್ದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿ, ನುಗು ಮತ್ತು ತುಂಗಾ ಪ್ರಾಜೆಕ್ಟುಗಳೆಲ್ಲವನ್ನೂ ನೇರವಾಗಿ ಇವರ ಕೈಕೆಳಗಿರುವಂತೆ ಮಾಡಿದರೆ ಅನುಕೂಲವಾಗುತ್ತದೆಂದು ತಾವು ಭಾವಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹೀಗೆ ಇವರು ಅಧಿಕಾರದಲ್ಲಿದ್ದರೆ ಈ ಕೂಲಗಳವರ ಮತ್ತು

....

Mr. SPEAKER.—That does not arise.

Sri V. M. MASCARENHAS (Bangalore Retroceded Area—General.)—Is there a Chief Engineer for Irrigation in Mysore?

The Hon'ble Sri T. MARIAPPA.—There is Chief Engineer of Mysore.

Sri V. M. MASCARENHAS.—For Irrigation?

The Hon'ble Sri T. MARIAPPA.—There is no separate Chief Engineer for Irrigation.

Sri M. GOVINDA REDDY.—Is it the opinion of the Government that wherever extra services are required, they should re-employ officers already retired from service or extend the services of retired officers?

The Hon'ble Sri T. MARIAPPA.—In some special cases, especially in the technical field of work, we do extend the services of officers like Engineers, etc., or re-employ them after retirement, if we find them efficient and useful.

Sri G. VEERAPPA (Chitaldrug District—General).—(*e*) ಮತ್ತು (*g*) ಪ್ರಶ್ನೆಗಳಿಗೆ ತಾವು ಸರಿಯಾಗಿ ಉತ್ತರ ಹೇಳಿಲ್ಲ. May I take it that it is not in accordance with the Service Regulations?

The Hon'ble Sri T. MARIAPPA.—He is also governed by the Mysore Service Regulations.

ಶ್ರೀ ಜಿ. ವೀರಪ್ಪನವರು.—ಇನ್ಯಾರೂ ಇರಿಗೇಷ್ಟ್ ಕೆಲಸಕ್ಕೆ ದಕ್ಷರಾದವರಿಲ್ಲವೆಂದು ಅವರನ್ನು ನೇಮಕ ಮಾಡಿದಿರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಂಡಿತ ಹಾಗಲ್ಲ. ಅವರು ಬಹಳ ದಕ್ಷರು ಮತ್ತು ಅನುಭವ ಶಾಲಿಗಳು. ಆದ್ದರಿಂದ ಅವರು ಇರಿಗೇಷ್ಟ್ ಕೆಲಸಗಳಿಗೆ ಇರಬೇಕೆಂದು ಅಭಿಪ್ರಾಯಪಟ್ಟಿದೆ, ಅಷ್ಟೆ.

ಶ್ರೀ ಜಿ. ವೀರಪ್ಪನವರು.—ಅವರ ವಯಸ್ಸೆಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಜಿ ವೀರಪ್ಪನವರು.—ಅವರಿಗೆ ಫಿಜಿಕಲ್ disability ಇರುವುದರಿಂದ ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರನ್ನು ನೋಡಿದರೆ ಗೊತ್ತಾಗುತ್ತದೆ. ಅವರಿಗೆ ಸೊಗಸಾಗಿ physical ability ಇದೆ. ಚಟುವಟಿಕೆಯಾಗಿಯೂ ಮತ್ತು ದೃಢಕಾಯರಾಗಿಯೂ ಇದ್ದಾರೆ.

ಶ್ರೀ ಜಿ. ವೀರಪ್ಪನವರು.—(h) ಪ್ರಶ್ನೆಗೆ ಉತ್ತರವಾಗಿ "There are a number of precedents," ಎಂದು ಹೇಳಿದೆ. ಹಾಗೆ ಯಾರನ್ನಾದರೂ ಪುನಃ ಕೆಲಸಕ್ಕೆ ತೆಗೆದುಕೊಂಡಿರುವ ಉದಾಹರಣೆಯಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ ಎಂ. ವಿಶ್ವೇಶ್ವರಯ್ಯನವರು, ಶ್ರೀ ಕರ್ಪೂರ ಶ್ರೀನಿವಾಸರಾಯರು, ಶ್ರೀ ಕಡಾಂಬಿ, ಶ್ರೀ ಆರ್. ಎ. ಶ್ರೀನಿವಾಸಯ್ಯಂಗಾರ್ಯರು (ಮದ್ರಾಸು ಸರ್ವಿಸ್ಸಿನಿಂದ ನಿವೃತ್ತರಾದವರು), ಶ್ರೀ ನಂದರವರು (ರೈಲ್ವೆ ಇಲಾಖೆ), ಮೆಡಿಕಲ್ ಇಲಾಖೆಯಲ್ಲಿ ಡಾ! ಟಿ. ಶೇಷಾಚಲಂರವರು, ಬೊಂಬಾಯಿ ಸರ್ವಿಸ್ಸಿನಿಂದ ನಿವೃತ್ತರಾದ ಶ್ರೀ ಎಚ್. ಎಚ್. ಐಯ್ಯಂಗಾರ್ಯರು—ಹೀಗೆ ಬೇಕಾದಷ್ಟು ಇಂಥ ನಂದರ್ಭಗಳಿವೆ.

Sri K. PUTTASWAMY (Mandya District-General).—How is it that he has forgotten all this so soon?

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಇನ್ನೂ ಯಾವುದಾದರೂ ಜವಾಬ್ದಾರಿ ಕೆಲಸ ಅವರಿಗಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೃಷ್ಣರಾಜಸಾಗರ ಸ್ಪೆಷಲ್ ಕಮಿಟಿಯ ವರದಿ ತಮಗೆ ಗೊತ್ತಿದೆ. ಅವರು ಇರ್ವಿನ್ ನಾಲೆಯಲ್ಲಿ ಒಂದು ಇರಿಗೇಷ್ಟ್ ವ್ಯವಸ್ಥೆ ಮಾಡಬೇಕಾಗಿದೆ. ಅದೂ ಸಹ ಅವರ ಛಾರ್ಜಿನಲ್ಲಿದೆ.

ಶ್ರೀ ಬಿ. ಹುಚ್ಚೇಗೌಡರು.—ಅವರು ಯಾವ capacity ಯಲ್ಲಿ ಕೆಲಸ ಮಾಡುತ್ತಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಡ್ವೈಜರಾಗಿ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಈ ಪ್ರಾಜೆಕ್ಟಿಗೆ ಚೀಫ್ ಇಂಜನಿಯರು ಯಾರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಒಬ್ಬ ಚೀಫ್ ಇಂಜನಿಯರು ಮತ್ತು ಒಬ್ಬ ಡೆಪ್ಯುಟಿ ಚೀಫ್ ಇಂಜನಿಯರು ಮೈಸೂರಿನಲ್ಲಿದ್ದಾರೆ. ಇವರು ಅಡ್ವೈಜರು.

He is Adviser in charge of Major Irrigation Works like Lakkavalli, Tunga, Nugu and is also placed in charge of the special work connected with Krishnarajasagar.

Sri B. HUTCHE GOWDA.—So he is not in direct charge of the projects?

The Hon'ble Sri T. MARIAPPA.—He is an Adviser in the Public Works Department. He is also in direct charge of these three projects plus the work connected with Krishnarajasagar.

ಶ್ರೀ ಬಿ. ಹುಚ್ಚೇಗೌಡರು.—ಅಂಥ ಅಡ್ವೈಸ್ ಕೊಡುವುದಕ್ಕೆ ಚೀಫ್ ಇಂಜನಿಯರು ಸರಿಯಲ್ಲ ಎಂಬ ಭಾವನೆಯಿದೆಯೆ?

The Hon'ble Sri T. MARIAPPA.—It does not follow.

ಶ್ರೀ ಬಿ. ಹುಚ್ಚೇಗೌಡರು.—ಚೀಫ್ ಇಂಜನಿಯರ ಅಧಿಕಾರವನ್ನು ಇವರೇ ಚಲಾಯಿಸುತ್ತಾರೋ ಅಥವ ಡೈರೆಕ್ಟ್ ಛಾರ್ಜಿನಲ್ಲಿದ್ದಾರೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಡೈರೆಕ್ಟ್ ಛಾರ್ಜಿನಲ್ಲಿದ್ದುಕೊಂಡು ಚೀಫ್ ಇಂಜನಿಯರ ಅಧಿಕಾರವನ್ನು ಚಲಾಯಿಸುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಮೈಸೂರು ದೇಶದ ಚೀಫ್ ಇಂಜನಿಯರಿಗಿರುವಷ್ಟು ಅಧಿಕಾರ ಇವರಿಗಿಲ್ಲವೆಂದು ಭಾವಿಸಬಹುದೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಿಬ್ಬಂದಿ ಬಾಬು ಒಂದು ವಿನಾ ಬಾಕಿಯದರಲ್ಲಿ ಏನೂ ವ್ಯತ್ಯಾಸವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಈ ಮೂರು ಪ್ರಾಜೆಕ್ಟುಗಳಿಂದ ಈಗ 40 ಲಕ್ಷ ರೂಪಾಯಿಗಳ ಕೆಲಸವಾಗಿದೆ. ಇಷ್ಟಕ್ಕೇ ಒಬ್ಬ ಚೀಫ್ ಇಂಜನಿಯರು ಬೇಕೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವರ್ಷ ಈ ಮೂರು ಪ್ರಾಜೆಕ್ಟುಗಳಿಗೆ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದೆ, ಹಿಂದೆ ಕೃಷ್ಣರಾಜಸಾಗರದ ಕೆಲಸಕ್ಕೇ ಒಬ್ಬ ಸ್ಪೆಷಲ್ ಚೀಫ್ ಇಂಜನಿಯರಿದ್ದರು.

Sri V. M. MASCARENHAS.—Is there not one Chief Engineer for Roads and Buildings and another Chief Engineer for Irrigation?

Mr. SPEAKER.—How does that supplementary arise?

Sri V. M. MASCARENHAS.—It is stated in the answer that Sri Narasinga Rao is in direct charge of these three major irrigation works. I want to bring to notice that there will be clash of interests between the permanent Chief Engineer and the Adviser.

Mr. SPEAKER.—The Hon'ble Member is entering into a discussion during question time. He may as well do so at the time of the budget discussion.

Sri H. M. CHANNABASAPPA (Mysore District—General).—Am I to take it that the present Chief Engineer is not looking after Tunga, Lakkavalli and Nugu Projects?

Mr. SPEAKER.—That question does not arise

The Hon'ble Sri T. MARIAPPA.—Sri Narasinga Rao is in direct charge of these three major projects. One Chief Engineer will not be able to look after general irrigation as well as special work.

Sri H. M. CHANNABASAPPA.—May I know what salary he is getting?

The Hon'ble Sri T. MARIAPPA.—Rs. 1,400 including his pension.

Sri H. M. CHANNABASAPPA.—What were the circumstances under which he was retired?

The Hon'ble Sri T. MARIAPPA.—Superannuation.

Sri H. M. CHANNABASAPPA.—Was he retired before he was due?

The Hon'ble Sri T. MARIAPPA.—He was retired when he was due and again was re-employed.

Sri H. M. CHANNABASAPPA.—Was he given leave before retirement?

The Hon'ble Sri T. MARIAPPA.—The Government did not give any leave to him.

Sri H. M CHANNABASAPPA.—Was he asked to take leave?

The Hon'ble Sri T. MARIAPPA.—No.

Sri H. M. CHANNABASAPPA.—Were there any allegations against him at the time of retirement?

The Hon'ble Sri T. MARIAPPA.—No.

Sri H. M. CHANNABASAPPA.—Was he retired on account of inefficiency?

The Hon'ble Sri T. MARIAPPA.—No. On the other hand he was re-employed on account of efficiency.

Sri H. M. CHANNABASAPPA.—Now what is his position in service? What is his relation to the other Chief Engineers in service?

The Hon'ble Sri T. MARIAPPA.—He is the Adviser in charge of these major irrigation works in the Public Works Department.

Sri H. M. CHANNABASAPPA.—How long do the Government propose to keep this gentleman in service?

The Hon'ble Sri T. MARIAPPA.—We have re-employed him for one year.

Sri H. M. CHANNABASAPPA.—After one year, what is to become of these projects?

The Hon'ble Sri T. MARIAPPA.—The Government will make proper arrangements.

Sri H. M. CHANNABASAPPA.—Are the Government going to extend the services of Sri Narasinga Rao so long as the work on the three projects continue?

The Hon'ble Sri T. MARIAPPA.—It is a hypothetical question.

ಶ್ರೀ ಎ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ).— ಇವರು ಬಹಳ ದಕ್ಷರಾದ ಅಧಿಕಾರಿಗಳೆಂದು ಕೇಂದ್ರ ಸರ್ಕಾರದಿಂದ ಮತ್ತು ಇತರ ಸರ್ಕಾರಗಳಿಂದ ಇವರಿಗೆ ಆಹ್ವಾನ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಮೈನೂರು ಸರ್ಕಾರದವರಿಗೆ ಗೊತ್ತಿದೆ. ಮಧ್ಯಭಾರತ ಸರ್ಕಾರದಿಂದ ಮಾತ್ರ ಕರೆ ಬಂದಿತ್ತು.

Sri M. GOVINDA REDDY (Chitaldrug District—General).—What are the special qualifications of this officer?

The Hon'ble Sri T. MARIAPPA.—He is a retired Chief Engineer with a lot of experience and intelligence.

Sri M. GOVINDA REDDY.—Were not engineers with sufficient experience available in Government service?

The Hon'ble Sri T. MARIAPPA.—There are Engineers in Government service. There is one Chief Engineer and other Engineers also. But with regard to these three major irrigation works we wanted a person of ripe experience and therefore we had to re-employ Sri Narasinga Rao.

ಶ್ರೀ ಬಿ. ಹುಚ್ಚೇಗೌಡರು.—ಇವರು ರಿಟೈರ್ ಆದ ಮೇಲೆ ಎಷ್ಟನೆಯ ಸಾರಿ ಈಗ ಇವರನ್ನು ನೇಮಕ ಮಾಡಿರುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಎರಡನೆಯ ಸಲ.

ಶ್ರೀ ಬಿ. ಹುಚ್ಚೇಗೌಡರು.—ಮೊದಲು ರಿಟೈರ್ ಆದರು. ಆಮೇಲೆ ಸ್ಪೆಷಲ್ ಚೀಫ್ ಇಂಜನಿಯರಾಗಿ ನೇಮಕವಾಗಿದ್ದು ಈಗ ಅಡ್ವೈಜರಾಗಿರುವುದರಿಂದ ಇದು ಮೂರನೆಯ್ಸಲವಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ಇದು ಎರಡನೆಯ ಸಲ ಮಾತ್ರ.

ಶ್ರೀ ಬಿ. ಹುಚ್ಚೇಗೌಡರು.—ಈ ಕೆಲಸ ಮುಗಿಯುವವರೆಗೂ ಇವರು ಚೀಫ್ ಇಂಜನಿಯರಾಗಿರಬೇಕೆಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಊಹಾ ಪ್ರಶ್ನೆ.

ಅಧ್ಯಕ್ಷರು.—ಅವರನ್ನು ಒಂದು ವರ್ಷಕ್ಕೆ ಮಾತ್ರ ನೇಮಕಮಾಡಿಕೊಂಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಈ ರೀತಿ ನಿವೃತ್ತರಾಗಿರುವವರನ್ನು ಅಡ್ವೈಜ್ಜರಾಗಿ ತೆಗೆದುಕೊಂಡರೆ ಇಲಾಖೆಯಲ್ಲಿರುವವರಿಗೆ ಬಹಳ ಅನಮಾಧಾನವಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಏಳುವುದಿಲ್ಲ. ದಕ್ಷತೆ ಮತ್ತು ಅನುಭವ ಬಹಳವಾಗಿದ್ದುದರಿಂದ ದೇಶದ ಹಿತದೃಷ್ಟಿಯಿಂದ ಅವರನ್ನು ನೇಮಿಸಿದೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ಅಡ್ವೈಜರಾಗಿ ಅವರು ಮಾಡುತ್ತಿರುವ ಕೆಲಸ ಸುಗುಮವಾಗಿ ನಡೆಯುವುದಕ್ಕೆ ಸಾಧ್ಯವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರಿಯಾಗಿ ನಡೆಯುತ್ತಿದೆ. ಏನೂ ತೊಂದರೆಯಿಲ್ಲ.

ಶ್ರೀ ಬಿ ಹುಚ್ಚೇಗೌಡರು.—ಈಗಿರುವ ಅಧಿಕಾರಿಗಳಲ್ಲಿ ಬಹಳ ದಕ್ಷರಾದವರಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಅಧ್ಯಕ್ಷರು.—ಅದಕ್ಕೆ ಆಗಲೇ ಉತ್ತರ ಹೇಳಿದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಎಷ್ಟು ಜನ ಚೀಫ್ ಇಂಜನಿಯರು ನಮ್ಮ ದೇಶದಲ್ಲಿದ್ದಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಬ್ಬರು ಚೀಫ್ ಇಂಜನಿಯರು ಮತ್ತು ಒಬ್ಬರು ಡೆಪ್ಯುಟಿ ಚೀಫ್ ಇಂಜನಿಯರು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗಿರುವಾಗ ಈ ಅಡ್ವೈಜರ ಕೆಲಸವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಆಗಲೇ ಹೇಳಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇದು ಹೊಸ ಸಂದರ್ಭವಿರಬಹುದಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ಇಂಥ ಸಂದರ್ಭಗಳು ಯಥೇಚ್ಛವಾಗಿದ್ದುವು.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಿವೃತ್ತರಾಗಿರುವವರನ್ನು ಪುನಃ ನೇಮಕ ಮಾಡುವುದು ಸರಿಯಾದ ನೀತಿಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಅವರನ್ನು ನೇಮಕ ಮಾಡಿರುವುದನ್ನು ನೋಡಿ ಬಹು ಜನ ಸಂತೋಷಪಡುತ್ತಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ ಸಭೆಯಲ್ಲಿ ಇಷ್ಟು ಪ್ರಶ್ನೆಗಳನ್ನು ಕೇಳುವುದನ್ನು ನೋಡಿದರೆ ಸಂತೋಷವಿದೆ ಎಂದು ಹೇಳಬಹುದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಚಾರವನ್ನು ತಾವೇ ಯೋಚನೆ ಮಾಡಿ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇವರನ್ನು ನಿವೃತ್ತಿ ಮಾಡಿ ಬಹಳ ಬುದ್ಧಿವಂತರಾದ ಇತರರಿಗೆ ಕೆಲಸ ಮಾಡಲು ಅವಕಾಶ ಕಲ್ಪಿಸುತ್ತೀರಾ ?

The Hon'ble Sri T. MARIAPPA.—It is not a proper supplementary, Sir.

ಶ್ರೀ ಬಿ. ಎಸ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಒಂದು ವರ್ಷ ಆಗಿ ಅವರು ರಿಟೈರ್ ಆದಮೇಲೂ ಆ ಪ್ರಾಜೆಕ್ಟುಗಳು ಮುಗಿಯದಿದ್ದರೆ, ಅವರಿಂದಲೇ ಅಡ್ವೈಸ್ ತೆಗೆದುಕೊಳ್ಳುತ್ತೀರಾ ಅಥವಾ ತಾವೇ ಅಡ್ವೈಸ್ ಮಾಡುತ್ತೀರಾ ?

(ಉತ್ತರ ಇಲ್ಲ).

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ಮಪಂಗಡ).—ಈಗ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಅಡ್ವೈಜರ್ ಇರುವಂತೆ ಪ್ರತಿಯೊಂದು ಇಲಾಖೆಯಲ್ಲೂ ಇದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವ ಯಾವ ಇಲಾಖೆಯಲ್ಲಿ ಅಡ್ವೈಸ್ ಬೇಕು ಎಂದು ತೋರಿ ಬರುತ್ತದೆಯೋ ಅಲ್ಲೆಲ್ಲಾ ಅಡ್ವೈಜರುಗಳನ್ನು ಇಟ್ಟುಕೊಳ್ಳಬಹುದು.

ಶ್ರೀ ಟಿ. ಹನುಮಯ್ಯನವರು.—ಈ ಅಡ್ವೈಜರನ್ನು ನೇಮಿಸಿದ್ದಕ್ಕೂ, ಶ್ರೀ ಸಿದ್ದಯ್ಯನವರು ಪಬ್ಲಿಕ್ ವರ್ಕ್ಸ್ ಪೋರ್ಟ್‌ಫೋಲಿಯೋ ಬಿಟ್ಟಿದ್ದಕ್ಕೂ ಸಂಬಂಧವಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಏನೂ ಸಂಬಂಧವಿಲ್ಲ.

ಶ್ರೀ ಟಿ. ಹನುಮಯ್ಯನವರು.—ಶ್ರೀ ಸಿದ್ದಯ್ಯನವರಿಗೆ ಪಬ್ಲಿಕ್ ವರ್ಕ್ಸ್ ಪೋರ್ಟ್‌ಫೋಲಿಯೋ ಸೇರಿದ್ದಾಗ ಅವರಿಗೂ ಇವರಿಗೂ ಹೊಂದಾಣಿಕೆಯಿರಲಿಲ್ಲವೆಂಬುದು ಗೊತ್ತೇ ?

Mr. SPEAKER.—That does not arise.

Sri H. SIDDAVEERAPPA (Chitaldrug District—General).—Is there any precedent in the Public Works Department wherein an Adviser has been appointed ?

The Hon'ble Sri T. MARIAPPA.—I have already answered that question.

Sri H. SIDDAVEERAPPA.—I want to know whether there is any precedent in this department where an Adviser has been appointed ?

The Hon'ble Sri T. MARIAPPA.—Yes, Sir. Mr. John Bhore was re-employed as Adviser for one year for the new works, Thippagondanahalli.

Sri H. SIDDAVEERAPPA.—The Adviser to under the control or supervision of the Chief Engineer.

The Hon'ble Sri T. MARIAPPA.—He is not under the control of the Chief Engineer but he is a co-ordinate officer.

Sri H. SIDDAVEERAPPA.—Is there any possibility of overlapping of orders of these officers?

The Hon'ble Sri T. MARIAPPA.—There is no possibility. There is a clear-cut division. We have so allotted work to each officer.

Sri H. SIDDAVEERAPPA.—Are we to take it that in respect of the works for which this officer has been appointed as Adviser the Chief Engineer has nothing to do and cannot interfere with it?

The Hon'ble Sri T. MARIAPPA.—Only with respect to works directly in charge of the Adviser, the Chief Engineer is not likely to interfere. I am happy to tell the House that both the Chief Engineer and the Adviser are on the happiest terms.

Sri H. SIDDAVEERAPPA.—So, are we to take it that in the works in which this Adviser has been appointed, the Chief Engineer is not responsible for those works and that he cannot be held responsible for them?

The Hon'ble Sri T. MARIAPPA.—I have already answered that question. Except with regard to establishment, the Adviser is in direct charge of these works.

Sri H. SIDDAVEERAPPA.—Who is in charge of the administrative control?

The Hon'ble Sri T. MARIAPPA.—The Adviser is in charge of administrative control of these three works.

Mr. SPEAKER.—Next question. Sri N. Hutch Masthy Gowda.

Appointment of persons without proper qualifications in the Sub-Overseer's Cadre.

*Q.—243. Sri N. HUTCH MASTHY GOWDA (Tumkur District—General).—

Will the Government be pleased to state:—

(*a*) the number of persons without proper qualifications holding appointments in the Sub-Overseer's cadre under some other designation in the Public Works Department;

(*b*) the reasons for the same?

*A.—The Hon'ble Sri T. MARIAPPA (Home Minister).—

(*a*) The question is not clear.

(*b*) Does not arise in view of reply to (*a*).

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ವರ್ಕ್ ಇನ್‌ಸ್ಪೆಕ್ಟರ್ಸ್ ಎಂಬ ಹೆಸರಿನಲ್ಲಿ ಸಬ್ ಓವರ್‌ಸೀಯರುಗಳು ಮಾಡಬೇಕಾದ ಕೆಲಸ ಮಾಡುತ್ತಿರುವವರು ಎಷ್ಟು ಜನ ಇದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮ್ಮ ಪ್ರಶ್ನೆ ಸ್ಪಷ್ಟವಾಗಿರಲಿಲ್ಲ. ಆದ್ದರಿಂದ ಏವರ ತರಿಸುವುದಕ್ಕಾಗಲಿಲ್ಲ. ನೋಟೀಸ್ ಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅಂಥವರು ಯಾರಾದರೂ ಇದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅವರಿಗೆ ಸರಿಯಾದ ಕ್ವಾಲಿಫಿಕೇಷನ್ ಇಲ್ಲ ಎನ್ನುವುದಾದರೂ ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅನುಭವ ಇರುತ್ತದೆ. ಅವರನ್ನು ನೇಮಕ ಮಾಡಿಕೊಂಡಿರುವುದು ಯಾವ ಆಧಾರದ ಮೇಲೆ ಎಂಬುದನ್ನು ಹೇಳಬೇಕಾದರೆ ನೋಟೀಸ್ ಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಕ್ವಾಲಿಫಿಕೇಷನ್ ಇಲ್ಲದೆ, ವರ್ಕ್ ಇನ್‌ಸ್ಪೆಕ್ಟರಾಗಿರುವವರು ಸಬ್ ಓವರ್‌ಸೀಯರುಗಳು ಮಾಡುವ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಕ್ವಾಲಿಫೈಡ್ ಆಗಿದ್ದವರು ಇದ್ದರೆ ಕೂಡಲೇ ನೇಮಕ ಮಾಡುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೇ ರೀತಿ ಮಾಡುತ್ತಿದ್ದೇವೆ. ಹಂಗಾಮಿ ವರ್ಕ್ ಇನ್‌ಸ್ಪೆಕ್ಟರುಗಳನ್ನು ತೆಗೆದುಹಾಕಿರುವ ಸಂದರ್ಭ ಇದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಚೆಗೆ ಮೈಸೂರು ದೇಶದ ಇಂಜಿನಿಯರಿಂಗ್ ಡಿಪ್ಲೊಮಾ ತೆಗೆದುಕೊಳ್ಳದೆ, ಬೇರೆ ಒಂದು ಪರೀಕ್ಷೆ ಪಾಸ್ ಮಾಡಿಕೊಂಡಿದ್ದರೆ, ಅವರು ಸಬ್ ಓವರ್‌ಸೀಯರು ಮಾಡುವ ಕೆಲಸ ಮಾಡಬಹುದೆಂದು ರೆಕಗ್ನೈಸ್ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮ್ಮ ಪ್ರಶ್ನೆ ಸ್ಪಷ್ಟವಾಗಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ವರ್ಕ್ ಇನ್‌ಸ್ಪೆಕ್ಟರುಗಳು ಸಕ್ಕೂರು ಎಕ್ಸಾಮಿನೇಷನ್ ಎಂದು ಹೇಳಿ ಒಂದು ಎಕ್ಸಾಮಿನೇಷನ್ ಪಾಸ್ ಮಾಡಿಕೊಂಡಿದ್ದಾರೆ. ಅಂಥಾ ಎಕ್ಸಾಮಿನೇಷನ್ ಪಾಸ್ ಮಾಡಿದ್ದರೆ, ಅದು ಡಿಪ್ಲೊಮಾಗೆ ಸಮಾನವಾದ ಕ್ವಾಲಿಫಿಕೇಷನ್ ಎಂಬುದಾಗಿ ತೀರ್ಮಾನ ಮಾಡಿ, ಅವರು ಸಬ್ ಓವರ್‌ಸೀಯರುಗಳೂ ಆಗಿ ಕೆಲಸಮಾಡಬಹುದೆಂದು ತೀರ್ಮಾನಿಸಿದ್ದೀರಿ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಅಧ್ಯಕ್ಷರು.—10, 29, 175 ಪ್ರಶ್ನೆ ಇವುಗಳನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ವಿಧ್ಯು ಮಂತ್ರಿಗಳು ಬಂದಿಲ್ಲ.

Question No. 40. Janab Syed Abdur Rahman. The Hon'ble Member is not present. It will therefore be treated as an unstarred question.

Next Question. Sri Govinda Das.